# Current affairs of 2018-08-01 by KPSCVAANI.com

## * ಅಭಿವೃದ್ಧಿ ಕಾರ್ಯಗಳ ಜಾರಿಗೆ ಕಟ್ಟಪ್ಪಣೆ



ಜಿಲ್ಲಾಧಿಕಾರಿ, ಜಿಪಂ ಸಿಇಒಗಳ ಸಭೆ ಬಜೆಟ್ ಹಣ ಸದ್ಬಳಕೆಗೆ ಸಿಎಂ ಸೂಚನೆ ಎಲ್ಲ ಸಮುದಾಯದವರಿಗೆ ವಸತಿ ನಿಲಯ ಸ್ಥಾಪನೆ ಕಲಬುರಗಿ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕೈಗಾರಿಕೆ ಸ್ಥಾಪನೆಗೆ ಭೂಮಿ ವಿಪತ್ತು ನಿರ್ವಹಣೆ ಹಣದಲ್ಲಿ ಶಾಲೆಗಳ ರಿಪೇರಿ ಸ್ವಂತ ಕಟ್ಟಡದಲ್ಲಿ ವಸತಿಶಾಲೆಗಳ ಸಂಕಲ್ಪ ಭೂಮಿ ಗುರುತಿಸಲು ಆದೇಶ ತೀವ್ರಗತಿಯಲ್ಲಿ ಕೆಲಸ ಮಾಡಲು ಸೂಚನೆ

## * ಸಚಿವರಿಗೆ ಜಿಲ್ಲೆಗಳ ಉಸ್ತುವಾರಿ

ಬೆಂಗಳೂರು ನಗರ ಮತ್ತು ತುಮಕೂರು - ಡಾ. ಜಿ. ಪರಮೇಶ್ವರ್ ಉತ್ತರ ಕನ್ನಡ ಮತ್ತು ಧಾರವಾಡ - ಆರ್.ವಿ. ದೇಶಪಾಂಡೆ ರಾಮನಗರ ಮತ್ತು ಬಳ್ಳಾರಿ - ಡಿ.ಕೆ. ಶಿವಕುಮಾರ್ ಚಿಕ್ಕಮಗಳೂರು - ಕೆ.ಜೆ. ಜಾರ್ಜ್ ಬೆಳಗಾವಿ - ರಮೇಶ್ ಜಾರಕಿಹೊಳಿ ಬಾಗಲಕೋಟೆ - ಶಿವಾನಂದಪಾಟೀಲ್ ಕಲಬುರಗಿ - ಪ್ರಿಯಾಂಕ್ ಖರ್ಗೆ ಯಾದಗಿರಿ - ರಾಜಶೇಖರ ಪಾಟೀಲ್ ಚಿತ್ರದುರ್ಗ - ವೆಂಕಟರಮಣಪ್ಪ ಚಿಕ್ಕಬಳ್ಳಾಪುರ - ಎನ್.ಎಚ್. ಶಿವಶಂಕರರೆಡ್ಡಿ ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ - ಕೃಷ್ಣಬೈರೇಗೌಡ ದಕ್ಷಿಣ ಕನ್ನಡ - ಯು.ಟಿ. ಖಾದರ್ ಚಾಮರಾಜನಗರ - ಸಿ. ಪುಟ್ಟರಂಗಶೆಟ್ಟಿ ಹಾವೇರಿ - ಜಮೀರ್ ಅಹ್ಮದ್ ಖಾನ್ ಉಡುಪಿ - ಜಯಮಾಲ ಕೊಪ್ಪಳ - ಆರ್, ಶಂಕರ್ ಗದಗ - ಎನ್. ಮಹೇಶ್ ರಾಯಚೂರು - ವೆಂಕಟರಾವ್ ನಾಡಗೌಡ ದಾವಣಗೆರೆ - ಎಸ್.ಆರ್. ಶ್ರೀನಿವಾಸ್ (ವಾಸು) ಮಂಡ್ಯ - ಸಿ.ಎಸ್, ಪುಟ್ಟರಾಜು ಕೊಡಗು - ಸಾ.ರಾ. ಮಹೇಶ್ ಬೀದರ್ - ಬಂಡೆಪ್ಪ ಕಾಶಂಪೂರ್ ಹಾಸನ - ಎಚ್.ಡಿ. ರೇವಣ್ಣ ಶಿವಮೊಗ್ಗ - ಡಿ.ಸಿ, ತಮ್ಮಣ್ಣ ಬಿಜಾಪುರ - ಎಂ.ಸಿ. ಮನಗೂಳಿ ಮೈಸೂರು - ಜಿ.ಟಿ. ದೇವೇಗೌಡ

## * ರಾಜ್ಯ ಸರ್ಕಾರದಿಂದ ಕರ್ನಾಟಕ ಆಧಾರ್ ಇಂದೇ ಜಾರಿ



ರಾಷ್ಟ್ರಮಟ್ಟದಲ್ಲಿ ಆಧಾರ್ ಲಾಭ : * 3.79 ಕೋಟಿ ನಕಲಿ ಎಲ್‌ಪಿಜಿ ಸಂಪರ್ಕ ನಿಷೇಧ * 2.75 ಕೋಟಿ ನಕಲಿ, ನಕಲು ಪಡಿತರ ಚೀಟಿ ರದ್ದು * ಗ್ರಾಮೀಣಾಭಿವೃದ್ಧಿಯಲ್ಲಿ ನಕಲಿ ಫಲಾನುಭವಿಗಳನ್ನು ರದ್ದುಪಡಿಸಿದ್ದರಿಂದ ಶೇ.10 ಹಣ ಉಳಿತಾಯ  ಅಲ್ಪಸಂಖ್ಯಾತ ಇಲಾಖೆಯಲ್ಲಿ 5.26 ಲಕ್ಷ ನಕಲಿ ಫಲಾನುಭವಿಗಳ ರದ್ದು * ಸಮಾಜ ಕಲ್ಯಾಣ ಇಲಾಖೆಯಲ್ಲಿ 1.79 ಲಕ್ಷ ನಕಲಿ ಫಲಾನುಭವಿಗಳ ರದ್ದು

## * ಮಕ್ಕಳ ಅತ್ಯಾಚಾರಿಗಳಿಗೆ ಗಲ್ಲು: ಬಿಲ್ ಪಾಸ್



12 ವರ್ಷದೊಳಗಿನ ಬಾಲಕಿಯರ ಮೇಲೆ ಅತ್ಯಾಚಾರ ನಡೆಸಿ ಶಿಕ್ಷೆಗೊಳಗಾಗುವವರಿಗೆ ಮರಣದಂಡನೆ ವಿಧಿಸುವ ಸಂಬಂಧ ‘ಕ್ರಿಮಿನಲ್ ಕಾನೂನು ತಿದ್ದುಪಡಿ ವಿಧೇಯಕ-2018 ಲೋಕಸಭೆಯಲ್ಲಿ ಅನುಮೋದನೆಗೊಂಡಿದೆ. ಪ್ರಸ್ತುತ ಭಾರತೀಯ ದಂಡ ಸಂಹಿತೆ (ಐಪಿಸಿ) ಅಡಿಯಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರಿಗಳಿಗೆ ಶಿಕ್ಷೆ ವಿಧಿಸುವ ಬಗ್ಗೆ ಪ್ರಸ್ತಾಪವಿದೆ. ಆದರೆ, 12 ಅಥವಾ 16 ವರ್ಷಕ್ಕಿಂತ ಕಿರಿಯ ಬಾಲಕಿಯರ ಮೇಲೆ ಅತ್ಯಾಚಾರ ಅಥವಾ ಸಾಮೂಹಿಕ ಅತ್ಯಾಚಾರಕ್ಕೆ ಶಿಕ್ಷೆಯ ಬಗ್ಗೆ ನಿಯಮಗಳಿರಲಿಲ್ಲ. ಮುಖ್ಯಾಂಶಗಳು : * 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿ ಮೇಲೆ ಅತ್ಯಾಚಾರಕ್ಕೆ ಕನಿಷ್ಠ 20 ವರ್ಷ ಜೈಲು, ಜೀವಾವಧಿ ಅಥವಾ ಮರಣದಂಡನೆ * 16 ವರ್ಷಕ್ಕಿಂತ ಕಿರಿಯ ಮಕ್ಕಳ ಅತ್ಯಾಚಾರಿಗಳಿಗೆ ಕನಿಷ್ಠ ಶಿಕ್ಷೆ 10ರಿಂದ 20 ವರ್ಷಕ್ಕೆ ಹೆಚ್ಚಳ, ಆಜೀವಪರ್ಯಂತ ಶಿಕ್ಷೆಯಾಗಿ ಪರಿವರ್ತನೆಗೆ ಅವಕಾಶ. * ಎಲ್ಲಾ ರೀತಿಯ ಅತ್ಯಾಚಾರ ಪ್ರಕರಣಗಳ ತನಿಖೆ, ವಿಚಾರಣೆಗೆ 2 ತಿಂಗಳ ಕಾಲಮಿತಿ * ಅತ್ಯಾಚಾರ ಪ್ರಕರಣದ ಮೇಲ್ಮನವಿ ಇತ್ಯರ್ಥಕ್ಕೆ 6 ತಿಂಗಳ ಗಡುವು * 16 ವರ್ಷಕ್ಕಿಂತ ಕಿರಿಯ ಬಾಲಕಿಯ ಅತ್ಯಾಚಾರ ಅಥವಾ ಸಾಮೂಹಿಕ ಅತ್ಯಾಚಾರ ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ಇಲ್ಲ,

## * ಗೋಪಾಲಕೃಷ್ಣ ಗಾಂಧಿ ಅವರು ಈ ವರ್ಷದ ರಾಜೀವ್ ಗಾಂಧಿ ಸದ್ಭಾವನಾ ಪ್ರಶಸ್ತಿ



ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲರಾದ ಗೋಪಾಲಕೃಷ್ಣ ಗಾಂಧಿ ಅವರು ಈ ವರ್ಷದ ರಾಜೀವ್ ಗಾಂಧಿ ಸದ್ಭಾವನಾ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕೋಮು ಸಾಮರಸ್ಯ ಶಾಂತಿ ಮತ್ತು ಸದಾಶಯ ಉತ್ತೇಜನೆಗೆ ನೀಡಿದ ಕೊಡುಗೆ ಆಧರಿಸಿ, 24ನೇ ರಾಜೀವ್ ಗಾಂಧಿ ಸದ್ಭಾವನಾ ಪ್ರಶಸ್ತಿಯನ್ನು ಗೋಪಾಲಕೃಷ್ಣ ಗಾಂಧಿ ಅವರಿಗೆ ನೀಡಲು ತೀರ್ಮಾನಿಸಲಾಗಿದೆ.

## * ನಾಗರೀಕರ ರಾಷ್ಟ್ರೀಯ ನೋಂದಣಿ



ಅಸ್ಸಾಂ 3.29 ಕೋಟಿ ಪ್ರಜೆಗಳ ಪೈಕಿ 40 ಲಕ್ಷ ಜನರು ಪೌರತ ಅರ್ಹತೆ ಸಾಬೀತುಪಡಿಸುವ ದಾಖಲೆ ಹೊಂದಿಲ್ಲ ಎಂದು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್ಆರ್‌ಸಿ)ಯ ಅಂತಿಮ ಕರಡಿನಲ್ಲಿ ಬಯಲಾಗಿದೆ. ಏನಿದು ಎನ್ಆರ್‌ಸಿ ? : ನ್ಯಾಷನಲ್ ರಿಜಿಸ್ಟರ್ ಆಫ್ ಸಿಟಿ ಜನ್ ನ ಸಂಕ್ಷಿಪ್ತ ರೂಪವೇ 'ಎನ್ ಆರ್‌ಸಿ' ಅಂದರೆ ನಾಗರೀಕರ ರಾಷ್ಟ್ರೀಯ ನೋಂದಣಿ ಭಾರತೀಯ ನಾಗರಿಕರು ಮತ್ತು ಅಕ್ರಮ ವಿದೇಶಿಗರನ್ನು ಗುರುತಿಸುವ ಅಧಿಕೃತ ದಾಖಲೆ ಇದು. 1951ರಲ್ಲಿ ಮೊದಲ ಬಾರಿಗೆ ಎನ್ಆರ್‌ಸಿ ತಯಾರಿಸಲಾಯಿತು. ಈ ದಾಖಲೆಗಳನ್ನು ಅಸ್ಸಾಂನ ಜಿಲ್ಲಾಧಿಕಾರಿ ಮತ್ತು ವಿಭಾಗೀಯ ಕಚೇರಿಗಳಲ್ಲಿ ನಿರ್ವಹಣೆ ಮಾಡಲಾಗುತ್ತದೆ. ಭಾರತದಲ್ಲಿ ಅಸ್ಸಾಂ ಮಾತ್ರ ಈ ಎನ್ಆರ್‌ಸಿ ವ್ಯವಸ್ಥೆ ಹೊಂದಿದೆ. ಎನ್ಆರ್‌ಸಿ ಈಗ ಯಾಕೆ ? : ಅಸ್ಸಾಂ ನಲ್ಲಿ ಅಕ್ರಮ ಬಾಂಗ್ಲಾದೇಶಿಯರು ಹೆಚ್ಚಾಗಿದ್ದಾರೆ. ಅವರನ್ನು ದೇಶದಿಂದ ಹೊರಹಾಕಬೇಕು. ಎನ್ಆರ್‌ಸಿ ಅಪ್‌ಡೇಟ್ ಮಾಡಬೇಕು ಎಂದು ಅನೇಕ ಅರ್ಜಿಗಳು ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಿದ್ದವು. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ 2014ರ ಡಿಸೆಂಬರ್ 7ರಂದು ತೀರ್ಪು ನೀಡಿ, ಎನ್ಆರ್‌ಸಿ ಪ್ರಕಟಿಕ್ಕೆ ಕಾಲಮಿತಿ ನಿಗದಿಗೊಳಿಸಿತು. 2018ರ ಜುಲೈ 30 ಅಂತಿಮ ಗಡುವು ನೀಡಿತ್ತು. 2013 ಜುಲೈ 16ರಂದು ಎನ್ಆರ್‌ಸಿ ಪರಿಷ್ಕರಣೆ ಕೆಲಸ ಆರಂಭಿಸುವಂತೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಇದೀಗ ಎನ್ಆರ್‌ಸಿ ಕರಡು ಪಟ್ಟಿ ಪ್ರಕಟವಾಗಿದೆ. ಮೊದಲ ಕರಡು 2017ರ ಡಿಸೆಂಬರ್ 31ರಂದು ಎನ್ಆರ್‌ಸಿಯ ಮೊದಲ ಕರಡು ಪಟ್ಟಿಯನ್ನು ಪ್ರಕಟಿಸಲಾಗಿತ್ತು. 3.29 ಕೋಟಿ ಜನರ ಪೈಕಿ 1.90 ಕೋಟಿ ಜನರು ಎನ್ ಆರ್‌ಸಿ ಪಟ್ಟಿಯಲ್ಲಿ ಸ್ಥಾನ ಪಡೆದಿರಲಿಲ್ಲ. ಇದೀಗ ಜುಲೈ 30 ರಂದು ಕರಡು ಪಟ್ಟಿ ಪ್ರಕಟವಾಗಿದೆ. ಏನು ಲಾಭ ? : ಎನ್ಆರ್‌ಸಿ ಅಪ್‌ಡೇಟ್ ಮಾಡುವುದರಿಂದ ಭಾರತೀಯ ಪ್ರಜೆಗಳು ಮತ್ತು ಅಕ್ರಮ ವಲಸಿಗರನು(ಮುಖ್ಯವಾಗಿ ಬಾಂಗ್ಲಾದೇಶಿಯರು) ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುತ್ತದೆ.

## * ದಿನ ವಿಶೇಷ : ವ್ಯಸನ ಕುರಿತು ಜಾಗೃತಿ ಮುಕ್ತ ದಿನ

ಆಗಸ್ಟ್ 1 ರಂದು ವ್ಯಸನ ಕುರಿತು ಜಾಗೃತಿ ಮುಕ್ತ ದಿನವಾಗಿ ಆಚರಿಸಲಾಗುತ್ತಿದೆ. ಭಾರತದಲ್ಲಿ ಶೇ.8- ಶೇ.10ರಷ್ಟು ಮಿತ ಪುರುಷ ಮದ್ಯವ್ಯಸನಿಗಳಿದ್ದರೆ, ಮಹಿಳೆಯರಲ್ಲಿ ಶೇ.3-ಶೇ.5ರವರೆಗೆ ಮದ್ಯವ್ಯಸನಿಗಳಿದ್ದಾರೆ. ಜಗತ್ತಿನಾದ್ಯಂತ 1 ಬಿಲಿಯನ್ ಜನ ತಂಬಾಕು ಸೇವಿಸುತ್ತಿದ್ದು 3 ಮಿಲಿಯನ್ ಜನ ಸಾವನ್ನಪ್ಪುತ್ತಿದ್ದಾರೆ. ಅಧ್ಯಯನಗಳ ಪ್ರಕಾರ 16- 18 ವರ್ಷದ ಯುವಕರಲ್ಲಿ ಶೇ.25ರಷ್ಟು ಜನ ಇಂಟರ್‌ನೆಟ್ (ಆನ್‌ಲೈನ್ ಗೇಮಿಂಗ್, ಸೆಕ್ಸ್‌ಟಿಂಗ್ ಮತ್ತು ಶಾಪಿಂಗ್, ಅಶ್ಲೀಲ ಚಿತ್ರಗಳು) ವ್ಯಸನಕ್ಕೆ ಒಳಗಾಗಿದ್ದಾರೆ. ವಿಶ್ವಸಂಸ್ಥೆ ವರದಿ : ವಿಶ್ವಸಂಸ್ಥೆಯ ಡ್ರಗ್ಸ್ ಆ್ಯಂಡ್ ಕ್ರೈಮ್ (ಯುಎನ್‌ಒಡಿಸಿ)ಇತ್ತೀಚೆಗೆ ಬಿಡುಗಡೆಗೊಳಿಸಿದ ವಿಶ್ವ ಡ್ರಗ್ಸ್ ವರದಿ 2017ರಲ್ಲಿ ಜಗತ್ತಿನಾದ್ಯಂತ 3 ಕೋಟಿಗೂ ಅಧಿಕ ಮಂದಿ ಮಾದಕ ವ್ಯಸನಿಗಳಿದ್ದಾರೆ. ಉತ್ತರ ಅಮೆರಿಕ, ಪಶ್ಚಿಮ ಯೋರೋಪ್ ಮತ್ತು ಕೇಂದ್ರ ಯೋರೋಪ್ ರಾಷ್ಟ್ರಗಳಲ್ಲಿ ಹೆರಾಯಿನ್ ಬಳಕೆ ತೀವ್ರ ಹೆಚ್ಚಿದೆ. ಯುಎನ್‌ಒಡಿಸಿ ಮುಖ್ಯಸ್ಥ ಯೂರಿ ಫೆಡೆಟೋವ್ ತಿಳಿಸಿದ್ದಾರೆ. ಮಾದಕ ವಸ್ತುಗಳು ಮಿದುಳಿನ ಮೇಲೆ ಹೇಗೆ ಪರಿಣಾಮ ಬೀರುತ್ತವೆ ? ಡ್ರಗ್ ಸೇವನೆಯಿಂದ ಮನುಷ್ಯನ ಮಿದುಳಿನ ನರಗಳಲ್ಲಿ ಡೋಪಮೈನ್ ಎಂಬ ಹಾರ್ಮೋನ್ ಬಿಡುಗಡೆಯಾಗುತ್ತದೆ. ಡೋಪಮೈನ್ ಬಿಡುಗಡೆಯಾಗಿ, ಮಿದುಳಿನಲ್ಲಿ ಸಂತೋಷ ಉಂಟಾಗುತ್ತದೆ. ಮಿದುಳು ಮತ್ತೆಮತ್ತೆ ಸಂತೋಷ ಪಡಲು ಬಯಸಿ, ಮಾದಕದ್ರವ್ಯವನ್ನು ಹೆಚ್ಚು ಬಳಸುವಂತೆ ಉತ್ತೇಜಿಸುತ್ತದೆ.

## * ಅಮೆರಿಕಕ್ಕೆ ಆಪ್ತವಾದ ಭಾರತ



ಭಾರತದ ಜತೆ ರಕ್ಷಣಾ ತಂತ್ರಜ್ಞಾನ ಹಂಚಿಕೊಳ್ಳುಮದಕ್ಕೆ ಅನುಕೂಲವಾಗಲೆಂದು ವಾಣಿಜ್ಯ ಕಾರ್ಯತಂತ್ರದ ಎಸ್‌ಟಿಎ-1 ಸ್ಥಾನಮಾನ ವನ್ನು ಅಮೆರಿಕ ನೀಡಿದೆ. ಇದರಿಂದ ಅಮೆರಿಕದ ಜತೆ ವಾಣಿಜ್ಯ ವ್ಯವಹಾರ ನಡೆಸುವ ಉತ್ತರ ಅಟ್ಲಾಂಟಿಕ್ ಒಪ್ಪಂದ ಒಕ್ಕೂಟದ (ನ್ಯಾಟೋ) ಸದಸ್ಯ ರಾಷ್ಟ್ರಗಳ ಮಟ್ಟಕ್ಕೆ ಭಾರತದ ಸ್ಥಾನ ಏರಿದೆ. ಈ ಸ್ಥಾನಮಾನ ದಕ್ಕಿರುಮದರಿಂದ ಭಾರತಕ್ಕೆ ರಫ್ತಾಗುವ ಅತ್ಯಾಧುನಿಕ ರಕ್ಷಣಾ ಸಾಧನ ಸಲಕರಣಿ, ರಕ್ಷಣೇತರ ಉತ್ಪನ್ನಗಳಿಗೆ ಪರವಾನಗಿಯನ್ನು ಪಡೆಯಬೇಕಾದ ಅಗತ್ಯ ಇರುಮದಿಲ್ಲ. ರಾಜಧಾನಿ ದೆಹಲಿ ಮೇಲೆ ವಾಯು ಮಾರ್ಗದ ಮೂಲಕ ನಡೆಯಬಹುದಾದ ಸಂಭವನೀಯ ವೈಮಾನಿಕ, ಕ್ಷಿಪಣಿ, ಡ್ರೋನ್ ದಾಳಿಯನ್ನು ಧ್ವಂಸಗೊಳಿಸುವ ಅಮೆರಿಕ ನಿರ್ಮಿತ ಕ್ಷಿಪಣಿ ರಕ್ಷಣಾ ವ್ಯವಸ್ಥೆ ಹೊಂದಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿರುವ ಬೆನ್ನಿಗೆ ಭಾರತಕ್ಕೆ ಎಸ್‌ಟಿಎ-1 ಸ್ಥಾನಮಾನ ದೊರಕಿರುಮದು ಮಹತ್ವ ಬೆಳವಣಿಗೆಯಾಗಿದೆ. ಅಮೆರಿಕ 36 ರಾಷ್ಟ್ರಗಳಿಗೆ ಎಸ್‌ಟಿಎ-1 ಸ್ಥಾನಮಾನ ನೀಡಿದೆ. ಈ ಪೈಕಿ ಬಹುತೇಕ ನ್ಯಾಟೋ ಸದಸ್ಯ ದೇಶಗಳಿದ್ದು, ಆಪ್ತವಾಗಿರುವ ನ್ಯಾಟೋಯೇತರ ಕೆಲವೇ ರಾಷ್ಟ್ರಗಳಿವೆ.

## * ರಿಲಯನ್ಸ್ ಇಂಡಸ್ಟ್ರೀಸ್ ನಂ. 1

ಇಂಧನದಿಂದ ಟೆಲಿಕಾಂ ತನಕ ಹರಡಿರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಭಾರತದ ಅತಿ ದೊಡ್ಡ ಷೇರು ಮಾರುಕಟ್ಟೆ ಮೌಲ್ಯದ ಕಂಪನಿಯಾಗಿ ಹೊರಹೊಮ್ಮಿದೆ.

## * ಸಾಗರ ತಳದಲ್ಲಿ ಸಂಶೋಧನೆಗಿಳಿದ ಇಸ್ರೋ



ಕೇಂದ್ರೀಯ ಭೂ ವಿಜ್ಞಾನ ಮಂತ್ರಾಲಯ ಸಹಯೋಗದಲ್ಲಿ ಯೋಜನೆ ಜಾರಿಯಾಗಲಿದ್ದು, ಡೀಪ್ ಮಿಷನ್ ಓಷನ್(ಡಿಎಂಒ) ಕುರಿತ ನೀಲಿ ನಕಾಶೆಯನ್ನು ಅನಾವರಣ ಗೊಳಿಸಲಾಗಿದೆ ಯೋಜನೆಯಲ್ಲಿ ತಿಳಿಸಿದಂತೆ ಉಬ್ಬರವಿಳಿತ ಶಕ್ತಿ ಮತ್ತು ಮೂವರನ್ನು ಹೊತ್ತು 6 ಸಾವಿರ ಮೀಟರ್ ಸಾಗರದಾಳಕ್ಕೆ ತೆರಳುವ ಸಬ್ ಮರ್ಸಿಬಲ್ ವಾಹನ ನಿರ್ಮಾಣ ಯೋಜನೆಯ ಪ್ರಮುಖ ಅಂಶಗಳಾಗಿವೆ. ವಿಶ್ವಸಂಸ್ಥೆ ವರದಿಯಿಂದ ಎಚ್ಚೆತ್ತ ಭಾರತ : ಮೂರು ದಿಕ್ಕುಗಳಲ್ಲಿ ಹಿಂದೂ ಮಹಾಸಾಗರದಿಂದ ಆವೃತವಾಗಿರುವ ಭಾರತದ ವ್ಯಾಪ್ತಿಗೆ ಕೇಂದ್ರ ಹಿಂದೂ ಮಹಾಸಾಗರದ 75 ಸಾವಿರ ಚದರ ಕಿ.ಮೀ. ಒಳಪಡಲಿದೆ. ಈ ಪ್ರದೇಶದಲ್ಲಿ 380 ದಶಲಕ್ಷ ಟನ್ ಪಾಲಿಮೆಟಾಲಿಕ್ ಅದಿರು ಪತ್ತೆಯಾಗಿದ್ದು, ಭಾರೀ ಪ್ರಮಾಣದಲ್ಲಿ ಕಬ್ಬಿಣ, ಮ್ಯಾಂಗನೀಸ್, ನಿಕ್ಕಲ್ ಮತ್ತು ಕೋಬಾಲ್ಟ್ ಖನಿಜಗಳನ್ನು ಒಳಗೊಂಡಿವೆ.

ಇಮಗಳಲ್ಲಿನ ಶೇ.10 ಖನಿಜಗಳು ಭಾರತದ 100 ವರ್ಷಕ್ಕೆ ಬೇಕಾದ ಶಕ್ತಿ ಸಂಪನ್ಮೂಲಗಳನ್ನು ಒದಗಿಸುತ್ತವೆ ಎಂದು ವಿಶ್ವಸಂಸ್ಥೆಯ ಸೀ-ಬೆಡ್ ಅಥಾರಿಟಿ ಹೇಳಿದೆ.

## * ಇ-ಆಡಳಿತದಲ್ಲಿ ಭಾರತಕ್ಕೆ 96 ನೇ ಸ್ಥಾನ




ವಿಶ್ವಸಂಸ್ಥೆಯ ಇ-ಆಡಳಿತ ರಾಂಕಿಂಗ್ (□□□□□□□□) ನಲ್ಲಿ ಭಾರತಮ 11 ಸ್ಥಾನಗಳ ಜಿಗಿತ ಕಂಡಿದೆ. ಪ್ರಧಾನಿ ನರೇಂದ್ರ ಮೋದಿ ಆಡಳಿತದ ಅವಧಿಯಲ್ಲಿ ಒಟ್ಟಾರೆ 22 ಸ್ಥಾನ ಮೇಲೇರಿದಂತಾಗಿದೆ. ವಿಶ್ವಸಂಸ್ಥೆ ಯು ಪ್ರತಿ 2 ವರ್ಷಗಳಿಗೊಮ್ಮೆ ಇ-ಆಡಳಿತಕ್ಕೆ ಸಂಬಂಧಿಸಿ ಜಾಗತಿಕ ಸಮೀಕ್ಷೆ ನಡೆಸುತ್ತದೆ. ಈ ಹಿಂದೆ 2016ರ ಸಮೀಕ್ಷೆಯಲ್ಲಿ ಭಾರತ 107ನೇ ಸ್ಥಾನದಲ್ಲಿದ್ದರೆ, ಸದ್ಯದ ಸಮೀಕ್ಷೆ ಯಲ್ಲಿ 96ನೇ ಬ್ಯಾಂಕ್‌ಗೆ ಏರಿದೆ. 2014 ರಲ್ಲಿ ಇ-ಆಡಳಿತದಲ್ಲಿ ಭಾರತ 118ನೇ ರಾಂಕಿಂಗ್ (□□□□□□□□) ನಲ್ಲಿತ್ತು. ಒಟ್ಟಾರೆ ಇ-ಆಡಳಿತದಲ್ಲಿ 96ನೇ ರಾಂಕ್ ಹೊಂದಿದ್ದರೂ, ಇ-ಸಹಭಾಗಿತ್ವದಲ್ಲಿ ಭಾರತ 15ನೇ ರಾಂಕ್ ಪಡೆದಿದೆ. ಈ ಮೂಲಕ ಏಷ್ಯಾ ದಲ್ಲಿ ಮೊದಲ ಸ್ಥಾನವನ್ನು ಭಾರತ ಪಡೆದಿದೆ. ಇ-ಆಡಳಿತ ಹಾಗೂ ಇ-ಸಹಭಾಗಿತ್ವದಲ್ಲಿ ಡೆನ್ಮಾರ್ಕ್ ಮೊದಲ ಸ್ಥಾನ ಗಳಿಸಿದೆ.